ಓ ಎಸ್ ನಂಃ 349/2020

ಪಿ. ಡಬ್ಲ್ಯೂ ಃ 2

ದಿಃ 30.10.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಆರ್ ಎಸ್ ವಕೀಲರಿಂದಃ

ಅವ್ವೇರಹಳ್ಳಿಯಲ್ಲಿ ನನ್ನ ಹೆಸರಿನಲ್ಲಿದ್ದ ಜಮೀನು ಮಂಚನಬೆಲೆ ಜಲಾಶಯ ನಿರ್ಮಾಣ ಮಾಡುವ ಸಮಯದಲ್ಲಿ ಮುಳುಗಡೆ ಆಯಿತು ಎಂದರೆ ಸರಿ. ಆ ಸಂದರ್ಭದಲ್ಲಿ ಬೆಂಗಳೂರಿನ ಗೋಪಾಲನಗರದಲ್ಲಿ ಸೈಟ್ ಮತ್ತು ಜಮೀನು ಕೊಟ್ಟಿದ್ದಾರೆ ಎಂದರೆ ಸರಿ. ಆ ಕಾರಣಕ್ಕಾಗಿ ನಾನು ಗೋಪಾಲನಗರದಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ, ಮುದ್ದನಪಾಳ್ಯದಲ್ಲಿ ಇರುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ಸುಮಾರು 45 ವರ್ಷಗಳಿಂದ ನಾನು ಅಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನಮ್ಮ ಆಧಾರ್ ಕಾರ್ಡ್ ಮುದ್ದನಪಾಳ್ಯದಲ್ಲಿ ಇರುತ್ತದೆ. ಮುದ್ದನಪಾಳ್ಯದಿಂದ ಅವ್ವೇರಹಳ್ಳಿ 25 ಕಿ.ಮೀಟರ್ ಆಗುತ್ತದೆ ಎಂದರೆ ಸರಿಯಲ್ಲ. 5 ಕಿ.ಮೀ. ದೂರ ಆಗುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ವಾದಿ ಏನು ಪರಿಹಾರ ಕೇಳಿ ದಾವೆ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ದಾವಾ ಸ್ವತ್ತಿನ ಚೆಕ್ ಬಂದಿ ಗೊತ್ತು. ಪೂರ್ವಕ್ಕೆ ನಮ್ಮ ತಾತ ಬೆಟ್ಟಯ್ಯನ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಗೋಮಾಳ, ಉತ್ತರಕ್ಕೆ ಗೋಮಾಳ ಮತ್ತು ದಕ್ಷಿಣಕ್ಕೆ ನಮ್ಮ ತಾತ ಚಿಕ್ಕರಂಗಯ್ಯ ಇವರ ಜಮೀನು ಇರುತ್ತದೆ. ವಾದಿಯು ಜಮೀನಿನ ಸ್ವಾಧೀನ ಕೊಡಿಸಬೇಕೆಂದು ಕೇಳಿಲ್ಲ, ಏಕೆಂದರೆ ಅವರೇ ಸ್ವಾಧೀನದಲ್ಲಿರುತ್ತಾರೆ. ಪ್ರತಿವಾದಿ 1 ಸರಸ್ವತಮ್ಮ ಇವರನ್ನು ನೋಡಿದ್ದೇನೆ. ಅವರ ಗಂಡನ ಹೆಸರು ಮುತ್ತುರಾಜು ಎಂದರೆ ಸರಿ. ಅವರನ್ನು ನಾನು ನೋಡಿದ್ದೇನೆ. ಅವ್ವೇರಹಳ್ಳಿಯಲ್ಲಿ ಸರಸ್ವತಮ್ಮ ಇವರು ನಾವು ಊರು ಬಿಟ್ಟು ನಂತರ ಬಂದು ವಾಸವಾಗಿದ್ದಾರೆ. ಸುಮಾರು 15 ವರ್ಷಗಳಿಂದ ಪ್ರತಿವಾದಿಗಳು ದಾವಾ ಸ್ವತ್ತನ್ನು ವ್ಯವಸಾಯ ಮಾಡುತ್ತಿದ್ದಾರೆ.

ದಾವಾ ಸ್ವತ್ತಿನ ಆರ್ ಟಿ ಸಿ ಈಗ ವಾದಿಯ ತಂದೆಯ ಹೆಸರಿನಲ್ಲಿದೆ. ಚಾಲ್ತಿ ವರ್ಷದ ಪಹಣಿಯನ್ನು ನಾನು ನೋಡಿಲ್ಲ. ಮುತ್ತುರಾಜು ಇವರ ತಂದೆಯ ಹೆಸರಿನಲ್ಲಿದ್ದ ಪಹಣಿಯನ್ನು ನಾನು ನೋಡಿದ್ದೇನೆ. ಸ.ನಂ. 52 ರ 4 ಎಕರೆ ಸ್ವತ್ತಿನ ಆರ್ ಟಿ ಸಿ ಮೊದಲು ಸರಸ್ವತಮ್ಮ ಇವರ ಗಂಡ ಮುತ್ತುರಾಜು ಇವರ ಹೆಸರಿನಲ್ಲಿತ್ತು ಮತ್ತು ಈಗ ಸರಸ್ವತಮ್ಮ ಇವರ ಹೆಸರಿನಲ್ಲಿದೆ ಎಂದರೆ ಸಾಕ್ಷಿ ಅವರು ಮಾಡಿಸಿಕೊಂಡಿರಬಹುದು ಎಂದು ಹೇಳುತ್ತಾರೆ. ವಾದಿ ಮುತ್ತುರಾಜು ಮತ್ತು ಅವರ ಕುಟುಂಬದವರು ದಾವಾ ಸ್ವತ್ತಿನಲ್ಲಿ ಭಾಗ ಮಾಡಿಕೊಂಡಿದ್ದರೋ ಇಲ್ಲವೋ ಎಂದು ಗೊತ್ತಿಲ್ಲ. ಅವರ

ಹೆಸರಿನಲ್ಲಿದ್ದ ಇತರೇ ಜಮೀನುಗಳ ಬಗ್ಗೆ ಗೊತ್ತಿಲ್ಲ. ವಾದಿಗಳು ಈಗ ಸೀಗೆಹಳ್ಳಿ ಗೇಟ್ ಬಳಿ ಮನೆ ಇದೆ ಎಂದರೆ ಸರಿ. ಅಲ್ಲಿ ವಾದಿ ಕೂಲಿ ಮಾಡಿಕೊಂಡಿರುತ್ತಾನೆ. ನನ್ನ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಯಿಸಿದ್ದೇನೆ. ಅದರಲ್ಲಿ ಏನು ಬರೆದಿದೆ ಎಂದು ನೆನಪಿಲ್ಲ. ವಾದಿಯು ದಾವೆ ಹಾಕುವ ಮೊದಲು ಪ್ರತಿವಾದಿಗಳಿಗೆ ಜಮೀನು ಬಿಟ್ಟುಕೊಡು ಎಂದು ಕೇಳಿದ್ದರು ಅವರು ಬಿಟ್ಟುಕೊಡದೇ ಇದ್ದಾಗ ದಾವೆ ಮಾಡಿದ್ದಾರೆ ಎಂಬ ವಿಷಯ ನನಗೆ ಗೊತ್ತಿಲ್ಲ. ಸ್ವಾಧೀನ ಬಿಟ್ಟುಕೊಡಬೇಕೆಂದು ವಾದಿ ಒಂದು ಬಾರಿ ಗಲಾಟೆ ಮಾಡಿದ್ದರು. ಆ ರೀತಿ ಗಲಾಟೆ ಆಗಿ 25 ವರ್ಷಗಳಾಗಿವೆ. ಸರಸ್ವತಮ್ಮ ಇವರಿಗೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನಾನು ನ್ಯಾಯಾಲಯಕ್ಕೆ ಒಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**